ದಿಃ 02-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. **PBP** ವಕೀಲರಿಂದ:

ನನ್ನ ತಾಯಿ ತವರು ಮನೆ ಕರಜಗಿ ಇರುತ್ತದೆ. ವಾದಪತ್ರದ ತೋರಿಸಿದ ವಂಶಾವಳಿಯನ್ನು ನಮ್ಮ ವಕೀಲರಿಗೆ ನಾನು ತಿಳಿಸಿರುತ್ತೇನೆ. ತಹಶೀಲ್ದಾರ ಕಾರ್ಯಾಲಯದಿಂದ ವಂಶಾವಳಿ ಪತ್ರವನ್ನು ಪಡೆದಿಲ್ಲ. ದಾವಾ ಆಸ್ತಿ ನನ್ನ ತಂದೆ ಹೆಸರಿನಲ್ಲಿ ಇರುತ್ತದೆ. ದಾವಾ ಆಸ್ತಿ ಮನೆ ಸಂಃ 4-97/1 ಇದು ಅರ್ಜುನ ಎನ್ನುವವರ ಹೆಸರಿನಲ್ಲಿತ್ತು, ಈಗ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. 1 ನೇ ವಾದಿ ಗಂಗಪ್ಪನ ಹೆಂಡತಿ ಎಂದು ತೋರಿಸಲು ಆಧಾರ ಕಾರ್ಡ ರೇಷನ ಕಾರ್ಡ ಮತ್ತು ಜಂಟಿ ಬ್ಯಾಂಕ ಖಾತೆ ಪಾಸಬುಕ್ಕನ್ನು ಹಾಜರುಪಡಿಸಿರುತ್ತೇನೆ.

ಗಂಗಪ್ಪನ ಅಡ್ಡ ಹೆಸರು ಅಗರಖೇಡ ಇರುತ್ತದೆ ಎಂದರೆ ಸರಿ. ನಿಪಿ 18 ರಲ್ಲಿ ಅಗರಖೇಡ ಎಂದು ಎಲ್ಲಿ ಬರೆದಿಲ್ಲ ಎಂದರೆ ಸಾಕ್ಷಿಯೂ ಖೇಡ ಎಂದು ಬರೆದಿದೆ ಎಂದು ನುಡಿಯುತ್ತಾರೆ. ಅಗರಖೇಡ ಮತ್ತು ಖೇಡ ಇವೆರಡೂ ಬೇರೆ ಬೇರೆ ಅಡ್ಡಹೆಸರುಗಳು ಎಂದರೆ ಸರಿಯಲ್ಲ. ನಿಪಿ 22 ರಲ್ಲಿ ಗಂಗಪ್ಪನ ಹಾವನ್ನ ಖೇಡ ಇರುತ್ತದೆ ಎಂದರೆ ಸರಿ. ವಾದಿಗಳಾದ ನಾವು ಮೃತ ಗಂಗಪ್ಪ ಮತ್ತು ಪ್ರತಿವಾದಿ 1 ಮತ್ತು 2 ರವರಿಗೆ ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿ ಮತ್ತು ಮೃತ ಗಂಗಪ್ಪನ ನಡುವೆ ಯಾವತ್ತೂ ಮದುವೆ ಆಗದೇ ಇದ್ದರೂ ಸಹ ಕೊಟ್ಟಿ ದಾಖಲಾತಿಗಳನ್ನು ಸೃಷ್ಟಿಸಿ ದಾವಾ ಆಸ್ತಿಯನ್ನು ಹೊಡೆಯಲು ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಮೃತ ಗಂಗಪ್ಪನಿಗೆ ಪ್ರತಿವಾದಿ 1 ಮತ್ತು 2 ಮಾತ್ರಾ ಕಾನೂನುಬದ್ಧ ವಾರಸುದಾರರು ಇರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**).**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ